ಸಿಗುವ ಪ್ರಕ್ರತಿ ಸೌಂದರ್ಯಕ್ಕೆ ಸಾಟಿ ಇಲ್ಲ. ಇಲ್ಲಿ ಕೊರೆಯುವ ಚಳಿ, ಗಾಳಿಯಿರುವುದಲ್ಲದೆ ಹೆಚ್ಚಿನ ತಿಂಗಳು ಹಿಮದಿಂದ ಕೂಡಿರುತ್ತದೆ. ಎಲ್ಲವೂ ಮುಸುಕು ಮುಸುಕು. ಇಪ್ಪತ್ತು ಅಡಿಯಿಂದ ಎರಡು ಮೈಲಿಯ ಪ್ರಪಾತದ ಜಾಗ ಅಂದಾಜಿಗೂ ಸಿಕ್ಕುವುದಿಲ್ಲ. ಅಕ್ಟೋಬರ್‌ನಿಂದ ಫೆಬ್ರುವರಿವರೆಗೆ ಹವಾಮಾನ ಅನುಕೂಲಕರ. ಅತ್ಯಂತ ಸುಂದರ ದೃಶ್ಯದ ಹಿನ್ನೆಲೆಯಲ್ಲಿ ಹಿಮದ ಹೊದಿಕೆ ಹೊದ್ದ ಭೂತಾನ ಭಾಗದ ಹಿಮಾಲಯ ಶ್ರೇಣಿ ಇದೆ. ಈ ಪರ್ವತ ಶ್ರೇಣಿಯಲ್ಲಿ ಮುಖ್ಯವಾದದ್ದು ಮೌಂಟ್ ಮಸಗ್ಗಾಂಗ್, ಇದು ಭೂತಾನಿನ ಅತೀ ಎತ್ತರದ ಶಿಖರವೂ ಹೌದು.

ಡೊಚುಲಾ ಪಾಸಿನ ಸುತ್ತ ಸೈಪ್ರಸ್ ಮರಗಳಿವೆ. ಅಲ್ಲದೇ ಹಲವು ತರಹದ ಹೂ ಗಿಡಗಳಿದ್ದು ಬೇಸಿಗೆ ಕಾಲದಲ್ಲಿ ಅಂದರೆ ಫೆಬ್ರುವರಿಯ ನಂತರ ಕಾಡು ಹೂಗಳನ್ನೂ ಕಾಣಬಹುದು. ಬೌದ್ಧ ಧರ್ಮದವರ ಧಾರ್ಮಿಕ ಕೆಂಪು, ಹಳದಿ, ನೀಲಿ, ಬಿಳಿ ಮತ್ತು ಹಸಿರು ಧ್ವಜಗಳನ್ನು ಅಲ್ಲಲ್ಲಿ ನೆಟ್ಟಿದ್ದಾರೆ. ಇಲ್ಲಿನ ಜನರು ಪ್ರತೀ ವರ್ಷ ಡಿಸೆಂಬರ್ ಹದಿಮೂರರಂದು ಡೊಚುಲಾ ಉತ್ಸವವನ್ನು ಆಚರಿಸುತ್ತಾರೆ. ಎಲ್ಲೆಲ್ಲೂ ಶಾಂತಿಯ ಸಂದೇಶವನ್ನು ಸಾರುತ್ತಿರುವಂತೆ ತೋರುವ ಈ ಸ್ತೂಪಗಳು ಬೆಳಗಿನ ಎಳೆ ಬಿಸಿಲಿನಲ್ಲಿ ಒಂದು ಬಗೆಯಾಗಿ ಕಂಡರೆ, ಸಂಜೆ ನಾಲ್ಕು ಗಂಟೆಗೆಲ್ಲಾ ಕತ್ತಲಾಗಿ ಗಾಳಿಯ ಆಟವೇ ಮೇಲಾಗುವ ಸಂದರ್ಭದಲ್ಲಿ ಈ ಪ್ರದೇಶ ಮತ್ತೊಂದು ತರಹವಾಗಿ ಕಾಣುತ್ತದೆ.

'ಡ್ರಕ್ ವಂಗ್ಯಾಲ್ ಖಾಂಗ್ ಜಾಂಗ್' ಅಥವಾ 'ಖಂಗಝಾನ್' ಎಂದೇ ಕರೆಯಲ್ಪಡುವ 108 ಸ್ತೂಪಗಳೇ ಡೊಚುಲಾ ಪಾಸಿನ ಪ್ರಮುಖ ಆಕರ್ಷಣೆ, ರಾಣಿ ಮಾತೆ 'ಅಶಿ ಡೋರ್ಜಿ ವಂಗ್ಮೊ ವಾಂಗ್ಚುಕ್' ವಿಜಯದ ಚಿನ್ಹೆಯಾಗಿ ಈ ಸ್ತೂಪಗಳನ್ನು ಕಟ್ಟಿಸಿದಳಂತೆ. ಅದಕ್ಕೆ ವಿಜಯೀ ಸ್ತೂಪಗಳೆಂದೂ ಕರೆಯುತ್ತಾರೆ.

108 ಸ್ತೂಪಗಳು ವೃತ್ತಾಕಾರದಲ್ಲಿ ಮೂರು ಸಾಲಿನಲ್ಲಿ ಕಟ್ಟಲ್ಪಟ್ಟಿದೆ. ಸುಮಾರು ಒಂದು ಮೀಟರ್ ಎತ್ತರವಿದ್ದು, ಮೊದಲ ಸುತ್ತಿನಲ್ಲಿ 45, ಎರಡನೆಯ ಸುತ್ತಿನಲ್ಲಿ 36, ಮೂರನೆಯ ಸುತ್ತಿನಲ್ಲಿ 26 ಸ್ತೂಪಗಳಿವೆ, ಮಧ್ಯದಲ್ಲಿ ಎಲ್ಲಕ್ಕಿಂತ ಎತ್ತರದ ಸ್ತೂಪವೊಂದಿದೆ. ಪ್ರತೀ ಸ್ತೂಪಕ್ಕೂ ಬಿಳಿ ಬಣ್ಣದ ಸುಣ್ಣ ಬಳಿದಿದ್ದು ಮಧ್ಯದಲ್ಲಿ ಕೆಂಪು ಬಣ್ಣದ ಪಟ್ಟಿ ಇದೆ, ಇಲ್ಲಿ ಬುದ್ಧ ಮತ್ತು ಅನುಯಾಯಿಗಳ ಚಿತ್ರಗಳಿವೆ.

ಈ ಬೆಟ್ಟದ ಕಣಿವೆ ಮಾರ್ಗದಲ್ಲಿ ಸ್ತೂಪಗಳಲ್ಲದೆ ದೇಶದ ಮೊದಲ ಸಸ್ಯಶಾಸ್ತ್ರದ ಉದ್ಯಾನವನ ಮತ್ತು 'ಡ್ರಕ್ ವಾಂಗ್ಯಾಲ್ ಲಾಖಾಂಗ್' ಎಂಬ ಹೆಸರಿನ ಚಿಕ್ಕ ಬೌದ್ಧ ದೇವಾಲಯವಿದೆ. ದೇವಾಲಯದ ಒಳ ಭಾಗದಲ್ಲಿ ಭೂತಾನಿನ ಇತಿಹಾಸ ಬಿಂಬಿಸುವ ಚಿತ್ರ ಕಲೆಗಳಿವೆ. ಅಲ್ಲದೆ ಚಳಿಗೆ ಚಹಾ ನೀಡುವ ಪುಟ್ಟ ರೆಸ್ಟೊರೆಂಟ್‌ಗಳಿವೆ. ಕಣಿವೆ ಮಾರ್ಗದಲ್ಲಿ ಮಿಲಿಟರಿ ಚೆಕ್ ಪೋಸ್ಟ್ ಇದ್ದು, ಪ್ರಯಾಣದ ಪರವಾನಿಗೆ ತೋರಿಸಬೇಕು.





